# ಜಾಣರ ಪೆಟ್ಟಿಗೆ

## ರಿಯಾಲಿಟಿ ಶೋ ಗಾದೆಗಳು

ಇಂಗ್ಲಿಷೇ ಕೈಲಾಸ!
ಅವಧಿ ಇದ್ದಷ್ಟು ಇಂಗ್ಲಿಷ್ ಮಾತನಾಡು!
ಇದರಲ್ಲಿ ಭಾಗವಹಿಸಿದವ ಕಣ್ಣೀರು ಹಾಕಲೇಬೇಕು!
ಬೆಳೆಯುವ ಪೈರು ರಿಯಾಲಿಟಿ ಶೋದಲ್ಲಿ!
ಸತ್ಯಕ್ಕೆ ಬೆಲೆಯಿಲ್ಲ, ಸುಳ್ಳಿಗೆ ಕೊರತೆ ಇಲ್ಲ!
ವೀಕ್ಷಕರಿಗೆ ನೆಮ್ಮದಿಯಿಲ್ಲ, ನಿರ್ಮಾಪಕರಿಗೆ ಚಿಂತೆಯಿಲ್ಲ!
ನಿರ್ಮಾಪಕರಿಗೆ ಆಟ, ವೀಕ್ಷಕರಿಗೆ ಪ್ರಾಣಸಂಕಟ!
ಧಾರಾವಾಹಿ ಡೊಂಕಾದರೆ, ಅದನ್ನು ನೋಡುವವ ಡೊಂಕೆ?

-ಸುಚಿತ್ರಾ ನರಸಾಪೂರ, ಶಿವಮೊಗ್ಗ

## ಜಾಣರ ಪೆಟ್ಟಿಗೆ ಅನ್ವರ್ಥಕ

ಲಕ್ಷಾಂತರ ಮಂದಿ ವೀಕ್ಷಿಸುವ ಮೂರ್ಖರ ಪೆಟ್ಟಿಗೆಯಿಂದ ಸೃಷ್ಟಿಯಾದ 'ಜಾಣರ ಪೆಟ್ಟಿಗೆ' ಬಗ್ಗೆ ಎನ್. ಸುಬ್ರಮಣಿ ಮೆಚ್ಚುಗೆಯ ಮಾತುಗಳನ್ನು ಬರೆದಿರುವುದೇನೋ ಸರಿ. ಆದರೆ ಇಲ್ಲಿ ಪ್ರಕಟವಾಗುವ ಪತ್ರಗಳು ಬರೀ ಓದುಗರು ಓದಲು ಆಗುತ್ತದೆಯೇ ಹೊರತು, ಟಿ.ವಿ. ಕಾರ್ಯಕ್ರಮ ಆಯೋಜಕರಿಗೆ ತಿಳಿಯುತ್ತದೆಯೋ ಇಲ್ಲವೋ ಎಂಬ ಅನುಮಾನ ನನಗಿತ್ತು.

ಆದರೆ 'ಯಾರಿಗುಂಟು ಯಾರಿಗಿಲ್ಲ'ದ ಬಗ್ಗೆ ಬರೆದ ಪತ್ರದ ಪ್ರಭಾವ ಆ ಕಾರ್ಯಕ್ರಮ ಪ್ರಸಾರವಾದಾಗ ಗೊತ್ತಾಯಿತು. 'ಸೂಪರ್ 5' ಉತ್ತರಗಳ ಬಗ್ಗೆ ಅನೇಕರು ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಇದನ್ನು ಗಮನಿಸಿದ ಆ ಕಾರ್ಯಕ್ರಮದ ನಿರೂಪಕಿ ಈಗ ಸರಿಯಾಗಿ ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಜಾಣರ ಪೆಟ್ಟಿಗೆಯಿಂದ ಕಾರ್ಯಕ್ರಮ ನಡೆಸುವವರು ತಪ್ಪು- ಒಪ್ಪುಗಳನ್ನು ತಿದ್ದಿಕೊಂಡರೆ ವೀಕ್ಷಕರ ಅಭಿಪ್ರಾಯಕ್ಕೂ ಬೆಲೆ ಸಿಕ್ಕಂತಾಗುತ್ತದೆ.

-ವೀಣಾ ಶಂಕರ್, ದಾವಣಗೆರೆ

## ದೆವ್ವಗಳ ಕಾಟ

ಈ ಟಿವಿಯ 'ಬಂದೇ ಬರತಾವ ಕಾಲ' (ರಾತ್ರಿ 10 ಗಂಟೆ)ದಲ್ಲಿ ತನ್ನನ್ನು ಕೊಲೆ ಮಾಡಿದ ಸುಬ್ಬು ಸತ್ತ ಮೇಲೆ ಶಾಂತಲಾಗೆ ಬಡಿದುಕೊಂಡಿರುವ ಸುಧಾಕರನ ಲೇಟ್ ಲತೀಫ್ ದೆವ್ವ ಈಗ ವಿನಾಕಾರಣ ಎಗರಾಡುತ್ತಿದೆ! ಇದೇ ವಾಹಿನಿಯ 'ಸುಪ್ರಭಾತ' (ಮಧ್ಯಾಹ್ನ 3-30) ದಲ್ಲೂ ಕೆಲ ವಾರಗಳ ಕಾಲ ದೆವ್ವಗಳ ನಾಟಕ ನಡೆದಿತ್ತು! ಇನ್ನು ಸುವರ್ಣ ವಾಹಿನಿಯ 'ಗ್ರಹಣ'ದಲ್ಲಂತೂ ದೆವ್ವಗಳದ್ದೇ ದರ್ಬಾರು! ಇದೆಲ್ಲಾ ಹೋಗಲಿ ಪ್ರಾರಂಭದಲ್ಲಿ ಜ್ಯೋತಿಷ್ಯ, ಮೂಢನಂಬಿಕೆಗಳನ್ನು ಖಂಡಿಸುವುದರ ಮೂಲಕ ಪ್ರಗತಿಪರ ಧೋರಣೆ ತಳೆದಂತಿದ್ದ ಝೀ ಕನ್ನಡದ 'ನಮ್ಮಮ್ಮ ಶಾರದೆ'ಯಲ್ಲೂ ಪುಟ್ಟ ಜಾನಕಿಯ ಆತ್ಮ ಆಲಾಪಿಸುತ್ತಾ ಸೇಡಿಗಾಗಿ ಹಾತೊರೆಯುತ್ತದೆ! ಒಟ್ಟಿನಲ್ಲಿ ವೀಕ್ಷಕರಿಗಂತೂ ದೆವ್ವಗಳ ಕಾಟವೋ ಕಾಟ.

-ಮೃಗಶಿರಾ, ಬೆಂಗಳೂರು

## ಹಿಂದೂಸ್ತಾನಿಯಲ್ಲಿ ತಾಳ!

ಝೀ ಕನ್ನಡದ ನಮ್ಮಮ್ಮ ಶಾರದೆಯ ಇತ್ತೀಚಿನ ಕಂತಿನಲ್ಲಿ ಪುಟ್ಟ ಬಾಲಕಿಯೊಬ್ಬಳು 'ಕೋಯಲಿಯಾ ಬೋಲೆ ಅಂಬುವಾ ಡಾಲ್‌ಪರ್' ಎಂಬ ಸಾಹಿತ್ಯವನ್ನು ಹಿಂದೂಸ್ತಾನಿ ಶೈಲಿಯಲ್ಲಿ ಹಾಡುತ್ತಾಳೆ. ಆದರ ಜತೆ ಜತೆಗೇ ಆಕೆ ತಾಳ ಹಾಕುತ್ತಾಳೆ! ಹಿಂದೂಸ್ತಾನಿ ಹಾಡುಗಾರಿಕೆಯಲ್ಲಿ ಈ ರೀತಿಯ ತಾಳದ ಬಳಕೆ ಇಲ್ಲವೆಂಬುದು ನಿರ್ದೇಶಕರಿಗೆ ತಿಳಿಯದೆ?

**-ಅಪೇಕ್ಷಾ ಪೈ, ಮೂಡುಬಿದರೆ**

ಈ ಮೇಲಿನ ಜಾಣರ ಪೆಟ್ಟಿಗೆ ಮತ್ತು ಮುಂದಿನ ಪುಟದ ಚರ್ಚೆಯಲ್ಲಿ ಪ್ರಕಟವಾದ ಪತ್ರಗಳಿಗೆ ಮಾತ್ರ ಸೂಕ್ತ ಸಂಭಾವನೆ ನೀಡಲಾಗುವುದು. - ಸಂ

**ಪ್ರತಿಕ್ರಿಯೆ**

## ಬೇರೆ ನಟಿ ಬೇಕಿತ್ತು

ಸುಮಧುರ ಗೀತೆಯೊಂದಿಗೆ ಪ್ರಸಾರವಾಗುವ 'ಕಲ್ಯಾಣಿ' ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. ತಂದೆಯ ಪಾತ್ರದಲ್ಲಿ ಕುಣಿಗಲ್ ನಾಗಭೂಷಣರು ಚೆನ್ನಾಗಿ ಅಭಿನಯಿಸಿದ್ದಾರೆ. ಆದರೆ ಕಲ್ಯಾಣಿ ಪಾತ್ರಕ್ಕೆ ಬೇರೆ ನಟಿಯನ್ನು ಆಯ್ಕೆ ಮಾಡಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

-ಜಗದೀಶ ಎಂ. ಸಂಗಣ್ಣವರ, ಬೈಲಹೊಂಗಲ

### ಯುವ ಕಲಾವಿದರಿಗೆ ಮಾದರಿ

ಏಣಗಿ ನಟರಾಜ ಅವರ ಮಾತುಗಳು ಯುವ ಕಲಾವಿದರಿಗೆ ದಿಕ್ಸೂಚಿಯಂತಿವೆ. ಸಾಹಿತ್ಯ, ಸಂಸ್ಕೃತಿಯ ಅರಿವಿರಬೇಕು ಎಂಬ ಅವರ ಮಾತುಗಳನ್ನು ಅನುಭವಶೂನ್ಯ ನಟರು ಕಲಿತುಕೊಂಡು ಗಟ್ಟಿಯಾಗಬೇಕಾದ ಅವಶ್ಯಕತೆ ಬಹಳ ಇದೆ.

-ಸೋಮು ಎಂ. ಘಟ್ಟ/ ನಾರಾಯಣ ಯಾಜಿ ಶಿರಾಲಿ, ಚಿಕ್ಕಮಗಳೂರು

ವಂಶಪಾರಂಪರ್ಯ ಕಡ್ಡಾಯವಲ್ಲ: ಮಹಾನವಮಿಯ ಧಣಿ ಪಾತ್ರಧಾರಿ ಏಣಗಿ ನಟರಾಜ ಅವರೊಂದಿಗೆ ನಡೆಸಿದ ಮಾತುಕತೆ ಮನೋಜ್ಞವಾಗಿತ್ತು. ನಟನೆ ವಂಶ ಪಾರಂಪರ್ಯ ಆಗಲೇಬೇಕೆಂದೇನೂ ಇಲ್ಲ. ಸ್ವಪ್ರಯತ್ನ, ಪರಿಶ್ರಮದಿಂದ ಸಿದ್ಧಿಸುವಂತಹದು. ನಿರಂತರ ಕಲಿಯುವುದು ಇದ್ದೇ ಇದೆ ಎಂಬ ಅವರ ಮಾತು ಬಹಳ ಹಿಡಿಸಿತು.

-ಸತೀಶ ಶೆಟ್ಟಿಗಾರ್, ಜಪ್ಪು/ ಎಚ್.ಆನಂದಕುಮಾರ್, ಚಿತ್ರದುರ್ಗ

ಒಳ್ಳೆಯ ಅವಕಾಶ ಸಿಗಲಿ: ಇದಕ್ಕೂ ಹೆಚ್ಚು ಸವಾಲಿನ ಹಾಗೂ ಅವರೊಳಗಿನ ಸುಪ್ತ ಕಲಾಪ್ರತಿಭೆ ಇಡಿಯಾಗಿ ಹೊರಹೊಮ್ಮುವಂತಹ ಮತ್ತಷ್ಟು ಪಾತ್ರಗಳು ಸಿಗುವಂತಾಗಲಿ.

-ಕೊಹಿಮ, ಬಸರಕೋಡು

ಚಲೋ ಐತ್ರಿ:ಪ್ರತಿಸ್ಪಂದನದಾಗ ಏಣಗಿ ನಟರಾಜರೊಂದಿಗೆ ನಾಗು ಅವರು ನಡೆಸಿದ ಸಂದರ್ಶನ ಅಗ್ದಿ ಚಲೋ ಮೂಡಿ ಬಂದೈತ್ರಿ.

-ಎಚ್.ಎನ್.ವಿಶ್ವನಾಥ, ಶಿವಮೊಗ್ಗ

## ಕುತೂಹಲ

ದೂರದರ್ಶನದ ಗಂಗೋತ್ರಿ, ಶಾಲಿನಿ ಧಾರಾವಾಹಿಗಳು ದಿನದಿಂದ ದಿನಕ್ಕೆ ಕುತೂಹಲ ಮೂಡಿಸುತ್ತಿವೆ.

-ಎಂ.ಕೆ.ರವಿಕಾಂತ, ತುಮಕೂರು

## ಚಿಕ್ಕ-ಚೊಕ್ಕ ಧಾರಾವಾಹಿ

ಈ ಟಿವಿಯಲ್ಲಿ ಮಾಡು ಸಿಕ್ಕದಲ್ಲ ಧಾರಾವಾಹಿ ಚಿಕ್ಕದಾಗಿ- ಚೊಕ್ಕವಾಗಿ 125ಕಂತುಗಳಲ್ಲಿ ಮುಕ್ತಾಯ ಕಂಡಿದ್ದು ಸಂತಸ ತಂದಿತು.

-ಮೋಹನಾ ವೆಂಕಟರಾಮಯ್ಯ, ಮೈಸೂರು

## ಎರಡನೇ ಇನ್ನಿಂಗ್ಸ್!

ಮನೆಯೊಂದು ಮೂರು ಬಾಗಿಲು ಎರಡನೇ ಇನ್ನಿಂಗ್ಸ್ ಆರಂಭವಾಗಿದೆ. ಇದ್ದಕ್ಕಿದ್ದಂತೆ ಇಪ್ಪತ್ತು ವರ್ಷ ಕಳೆದು, ಎಲ್ಲ ಪಾತ್ರಗಳಿಗೆ ಪ್ಲಾಸ್ಟಿಕ್ ಸರ್ಜರಿ ಆಗಿಬಿಟ್ಟಿದೆ! ಆದರೆ ಆಶಾ ಭಾರದ್ವಾಜ್ ಹಾಗೂ ಭಾರದ್ವಾಜ್ ಮಾತ್ರ ಅವರೇ. 20 ವರ್ಷ ಕಳೆದರೂ ಅವರ ಬಣ್ಣ, ರೂಪ ಕೂದಲು ಕೊಂಕುವಷ್ಟು ಬದಲಾಗಿಲ್ಲ. ಹಿಂಜಿ ಎಳೆಯುವುದರಲ್ಲಿ ಏನು ಅರ್ಥವಿದೆ? ಕನ್ನಡದಲ್ಲಿ ಕಥೆಗಳಿಗೆ ಬರವಿಲ್ಲ. ಹೊಸಬರಿಗೆ ಅವಕಾಶ ನೀಡಬಾರದೇ?

-ಸತ್ಯಬೋದ, ಗಾಯತ್ರಿ, ಬೆಂಗಳೂರು/ ಪದ್ಮಜಾ ಸುಂದರೇಶ್, ಮೈಸೂರು

## ಸರಳ ಭಾಷೆಯಲ್ಲಿ ವಿಜ್ಞಾನ

ಚಂದನದ ಬೆಳಗು ಕಾರ್ಯಕ್ರಮದಲ್ಲಿ ಡಾ. ಕೃಷ್ಣಮೂರ್ತಿ ಅವರ ಜತೆ ಸಂದರ್ಶನ ಚೆನ್ನಾಗಿ ಮೂಡಿಬಂತು. ವಿಜ್ಞಾನದ ಮಾಹಿತಿಯನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಸರಳವಾಗಿ ತಿಳಿಸಿಕೊಟ್ಟರು.

-ಕೆ.ಪಿ.ಸತ್ಯನಾರಾಯಣ, ಹಾಸನ

(ಮುಂದಿನ ಪುಟವನ್ನೂ ನೋಡಿ)